ಒಟ್ಟಿಗೇ ನುಡಿಸಿದೆ. ಎಸ್‌ಪಿಬಿ ದಂಗಾಗಿ ಹೋದ್ರು. 'ಇಂಥಾ ಸಂಗೀತಗಾರನನ್ನು ನಾನು ಇದುವರೆಗೆ ನೋಡೇ ಇಲ್ಲ' ಎಂದರು. ಇದು ನನ್ನ ಜೀವನದಲ್ಲಿ ಎಂದೂ ಮರೆಯಲಾಗದ ಘಟನೆ.

ಓದಿದ್ದು ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಬಿಎಸ್. ಆಮೇಲೆ ಖಾಸಗಿ ಕಂಪೆನಿಯೊಂದರಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿ ಹನ್ನೆರಡು ವರ್ಷ ಕೆಲಸ ಮಾಡಿದೆ. ಆಗ ದೆಹಲಿ, ರಾಜಸ್ತಾನ, ಜೈಪುರ, ಹಿಮಾಚಲಪ್ರದೇಶ, ಕಾಶ್ಮೀರ ಹೀಗೆ ಎಲ್ಲ ಕಡೆಗೆ ಪ್ರವಾಸ ಹೋದಾಗಲೂ ಬೇರೆ ಬೇರೆ ವಾದ್ಯ ಸಂಗ್ರಹಿಸುವುದು ಹವ್ಯಾಸವಾಗಿ ಬಿಡ್ತು. ವಾದ್ಯಗಳನ್ನು ತರುವುದು ಮಾತ್ರವಲ್ಲ ಅದರಲ್ಲಿ ಹೊರಡುವ ಸ್ವರದ ಸೊಬಗನ್ನು ಆಲಿಸುವುದು, ಅದರಲ್ಲಿ ಸಿನಿಮಾ ಹಾಡುಗಳನ್ನು ನುಡಿಸುವುದು, ಒಂದೇ ಹಾಡನ್ನು ಹಲವು ವಾದ್ಯಗಳಲ್ಲಿ ಏಕಕಾಲಕ್ಕೆ ನುಡಿಸುವುದು ಎಲ್ಲವನ್ನೂ ಅಭ್ಯಾಸ ಮಾಡಿಕೊಂಡೆ. ಬೇರೆ ರಾಜ್ಯಕ್ಕೆ ಹೋದಾಗ ಕೆಲವೊಮ್ಮೆ ಎರಡು ತಿಂಗಳು ಕಾಲ ತಂಗಬೇಕಾಗುತ್ತಿತ್ತು. ಆಗ ಅಲ್ಲೇ ಇದ್ದ ಸಂಗೀತದ ಅಂಗಡಿಯಿಂದ ವಾದ್ಯ ಪಡೆದು ಎರಡು ತಿಂಗಳೂ ನುಡಿಸಿ ಆಮೇಲೆ ವಾಪಸ್ ಕೊಟ್ಟು ಬಾಡಿಗೆ ರೂಪದಲ್ಲಿ ಹಣ ನೀಡುತ್ತಿದ್ದೆ.

ಸಂಗೀತದ ಹುಚ್ಚು ಎಷ್ಟು ಹಿಡಿಸಿತೆಂದರೆ ಕೆಲಸಕ್ಕೆ ರಾಜೀನಾಮೆ ನೀಡಿ ವಾದ್ಯಗಳಲ್ಲೇ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡೆ. ಅಲ್ಲಿಂದ ಮ್ಯೂಸಿಕ್ ಶೋ ಕೊಡಲಾರಂಭಿಸಿದೆ. ದೂರದ ಊರಿಗೆ ಪ್ರವಾಸಕ್ಕೆಂದು ರೈಲಿನಲ್ಲಿ ಹೋಗುವಾಗ ಭಿಕ್ಷುಕರು ಹಾರ್ಮೋನಿಯಂ, ಕೊಳಲು ಹೀಗೆ ಯಾವುದಾದರೂ ವಾದ್ಯ ನುಡಿಸಿಕೊಂಡು ಬರೋರು. ಅವರ ಬಳಿ 'ನಿನಗೆ ಅರ್ಧ ಗಂಟೆಯಲ್ಲಿ ಎಷ್ಟು ಹಣ ಸಿಗುತ್ತದೆ ಎಂದು ಕೇಳುತ್ತಿದ್ದೆ. 100 ರೂಪಾಯಿ ಎಂದು ಹೇಳಿದರೆ, ನಾನು ಅವರಿಗೆ 200 ರೂಪಾಯಿ ಕೊಟ್ಟು ಅವರಿಂದ ವಾದ್ಯ ತೆಗೆದುಕೊಂಡು ಅರ್ಧ ಗಂಟೆ ನುಡಿಸುತ್ತಿದ್ದೆ. ರೈಲಿನ ಬೋಗಿಯಲ್ಲಿ ಪ್ರಯಾಣ ಮಾಡುತ್ತಿದ್ದ ಎಲ್ಲರೂ ನನ್ನನ್ನು ಸುತ್ತುವರೆಯುತ್ತಿದ್ದರು. ಹೀಗೆ ವಾದ್ಯದೊಂದಿಗಿನ ಒಡನಾಟ ಹೆಚ್ಚುತ್ತಾ ಹೋಯಿತು. ಬಂದ ಹಣವನ್ನೆಲ್ಲ ವಾದ್ಯ ಖರೀದಿಗೆ ಬಳಸತೊಡಗಿದೆ. ಸದ್ಯ ಮನೆತುಂಬ ವಾದ್ಯಗಳೇ. ಸುಮಾರು 100 ಮೌತ್ ಆರ್ಗನ್, 80 ಕೊಳಲು, ಹಾರ್ಮೋನಿಯಂ, ಅಕಾರ್ಡಿಯನ್, ಹಾರ್ಮೋನಿಕ ಸೇರಿದಂತೆ ಹತ್ತು ಹಲವು ವಾದ್ಯಗಳು ಮನೆತುಂಬಿವೆ.





ಮೊದಮೊದಲು ಬೇರೆ ಬೇರೆ ವಾದ್ಯಗಳಲ್ಲಿ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಹಾಗೂ ಪಾಶ್ಚಾತ್ಯ ಸಂಗೀತ ನುಡಿಸುತ್ತಿದ್ದೆ. ಆಮೇಲೆ ನುಡಿಸಾಣಿಕೆ ವಿಶಿಷ್ಟವಾಗಿರಲಿ ಅಂತ ಮೂರು–ನಾಲ್ಕು ವಾದ್ಯಗಳನ್ನು ಒಟ್ಟಿಗೆ ನುಡಿಸಲಾರಂಭಿಸಿದೆ. ಅದಾಗಿ ಬೇರೆ ಬೇರೆ ಆರು ವಾದ್ಯಗಳನ್ನು ಎಂದರೆ ಮೌತ್ ಆರ್ಗನ್, ಅಕಾರ್ಡಿಯನ್, ಕೀಬೋರ್ಡ್, ಬೇಸ್ ಡ್ರಮ್, ಹೈಹ್ಯಾಟ್ ಹಾಗೂ ಗೆಜ್ಜೆ... ಒಟ್ಟಿಗೆ ನುಡಿಸಿದ್ದೂ ಇದೆ. ಹೀಗೆ ನುಡಿಸುವಾಗ ತುಂಬ ಸುಸ್ತಾಗ್ತಾ ಇತ್ತು, ಜೊತೆಗೆ ಬೆನ್ನುನೋವು ಕಾಡಲಾರಂಭಿಸಿತು. ವೈದ್ಯರೂ ಈ ಪ್ರಯೋಗ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಸಲಹೆ ನೀಡಿದರು. ಈಗ ಮೂರು ವಾದ್ಯಗಳನ್ನು ಒಟ್ಟಿಗೇ ನುಡಿಸುತ್ತೇನೆ. ಹೀಗೆ ನುಡಿಸುವ ಕಲಾವಿದರು ನಮ್ಮ ದೇಶದಲ್ಲಿ ಬಹಳ ಕಡಿಮೆ.

ದೇಶದಾದ್ಯಂತ 1,500ಕ್ಕೂ ಹೆಚ್ಚು ಶೋ ಕೊಟ್ಟಿದ್ದೇನೆ. ದಸರಾ, ರಾಜ್ಯೋತ್ಸವ, ಗಣೇಶೋತ್ಸವ, ಮದುವೆ ಮನೆ, ರಿಸೆಪ್ಷನ್, ಬರ್ತಡೆ ಪಾರ್ಟಿ, ಮದುವೆ ವಾರ್ಷಿಕೋತ್ಸವ, ಗೃಹಪ್ರವೇಶ ಮುಂತಾದ ಸಂದರ್ಭಗಳಲ್ಲಿ ಸಂಗೀತ, ಆರ್ಕೆಸ್ಟ್ರಾ ನಡೆಸಿಕೊಟ್ಟಿದ್ದೇನೆ. ಶಾಲಾಕಾಲೇಜು ವಾರ್ಷಿಕೋತ್ಸವ, ವೃದ್ಧಾಶ್ರಮ, ಅನಾಥಾಶ್ರಮಗಳಲ್ಲೂ ಕಾರ್ಯಕ್ರಮ ನಡೆಸಿಕೊಟ್ಟಿದ್ದೇನೆ. ಕನ್ನಡ, ತೆಲುಗು, ಹಿಂದಿ, ಇಂಗ್ಲಿಷ್ ಹಾಗೂ ತಮಿಳು – ಈ ಐದು ಭಾಷೆಗಳಲ್ಲಿ ಸಿನಿಮಾ ಹಾಡುಗಳನ್ನು ನುಡಿಸುತ್ತೇನೆ. ಎಲ್ಲವನ್ನೂ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಲಕ್ಷಗಟ್ಟಲೆ ಮಂದಿಯಿಂದ ವೀಕ್ಷಣೆ ಆಗಿದೆ.

ಕನ್ನಡ ಸಿನಿಮಾಕ್ಕೆ ಸಂಗೀತ ಸಂಯೋಜನೆ ಮಾಡಿದ್ದೇನೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಐದಾರು ವಾದ್ಯಗಳನ್ನು ನುಡಿಸುವುದನ್ನು ರೂಢಿಸಿಕೊಂಡಿದ್ದು, ಈಗಾಗಲೇ ಹಲವಾರು ಕಡೆಗಳಲ್ಲಿ ಇದನ್ನು ಪ್ರಸ್ತುತಪಡಿಸಿದ್ದೇನೆ. ದೆಹಲಿ, ಆಗ್ರಾ, ಮುಂಬಯಿ, ಪುಣೆ, ಕೋಲ್ಕತ್ತ, ಚೆನ್ನೈ, ಕೊಯಮತ್ತೂರು, ಜೈಪುರ, ಹೈದರಾಬಾದ್, ತಿರುಪತಿ ಮುಂತಾದ ಕಡೆಗಳಲ್ಲಿ ಶೋ ನೀಡಿದ್ದೇನೆ.

ನೂರಕ್ಕೂ ಹೆಚ್ಚು ವಿಡಿಯೊಗಳನ್ನು ಐದು ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಕರು ನೋಡಿದ್ದಾರೆ. ಸ್ಯಾಕ್ಸೊಫೋನ್, ಕ್ಲಾರಿಯೊನೆಟ್, ಗಿಟಾರ್, ಹಾರ್ಮೋನಿಯಂ, ಏರೊಫೋನ್, ಸೊಪ್ರನೊ, ಸೊಪ್ರಾನಿನೊ, ಮ್ಯಾಂಡೊಲಿನ್, ಟೆನರ್, ಪಿಯಾನೊ, ವೆನೋವ ಪೈಪ್ ಪ್ಯಾನ್ ಫ್ಲೂಟ್, ಮೆಲೊಡಿಯೊನ್, ಮೆಲೊಡಿಕ, ಕೀಬೋರ್ಡ್, ಗಿಟಾರ್, ಬಾನ್ಸುರಿ, ಚೈನೀಸ್ ಡಿಜಿ, ಮೌತ್ ಆರ್ಗನ್, ಅಕಾರ್ಡಿಯನ್, ವೆಸ್ಟರ್ನ್ ಫ್ಲೂಟ್, ಪಿಕೋಲ, ಐರಿಷ್ ವಿಷಲ್, ಕರ್ವ್ಡ್ ಇಂಗ್ಲಿಷ್ ಕಿ ಫ್ಲೂಟ್, ರೆಕಾರ್ಡರ್... ಇಷ್ಟು ವಾದ್ಯಗಳು ನನ್ನ ಬತ್ತಳಿಕೆಯಲ್ಲಿವೆ."

ಒಂದೆರಡು ವಾದ್ಯಗಳನ್ನು ನುಡಿಸಿ ಪರಿಣತಿ ಸಾಧಿಸಿ ಕಛೇರಿ ಕೊಡುವ ಕಲಾವಿದರು ನಮ್ಮಲ್ಲಿ ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ. ಆದರೆ ಐದಲ್ಲ, ಹತ್ತಲ್ಲ, ಬರೋಬ್ಬರಿ ಇಪ್ಪತ್ತೈದು ವಾದ್ಯಗಳನ್ನು ನುಡಿಸಿ ಸೈ ಎನಿಸಿಕೊಂಡಿರುವ ಕಲಾವಿದರು ಮಾತ್ರ ಕಾಣಸಿಗುವುದು ಅಪರೂಪದಲ್ಲಿ ಅಪರೂಪ!.

ಪ್ರತಿಕ್ರಿಯಿಸಿ: feedback@sudha.co.in

ಚಾನಲ್ ವೀಕ್ಷಣೆಗೆ www.youtube.com/@prasannasj1771/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.